# ನಿಸರ್ಗದ ಹಣ್ಣು ನೋನಿ

ಚಿತ್ರ ಲೇಖನ:
ವಿ. ಬಾಲಕೃಷ್ಣ ಶಿರ್ವ



ನೋನಿ, ಮೊರಿಂಡಾ ಶಿಟ್ರೋ ಫೋಲಿಯ ಜಾತಿಗೆ ಸೇರಿದ ಹಣ್ಣು. ಅಮೆರಿಕದಲ್ಲಿ ನೋನಿ ಪಾನೀಯವನ್ನು ಆಹಾರ ಸೇವನೆಯ ನಂತರ ಆರೋಗ್ಯಕರ ಪೇಯವಾಗಿ ಉಪಯೋಗಿಸಲಾಗುತ್ತದೆ. ಡಾ. ನೈಲ್ ಸೋಲೊಮನ್ ಎಂಬಾತ ಇಪ್ಪತ್ತನೇ ಶತಮಾನದ ಕೊನೆಯಲ್ಲಿ ಇದರಲ್ಲಿ ಔಷಧೀಯ ಗುಣ, ಪೌಷ್ಟಿಕಾಂಶ ಮತ್ತು ರೋಗನಿರೋಧಕ ಶಕ್ತಿ ಇರುವುದನ್ನು ಪತ್ತೆ ಹಚ್ಚಿದ ಬಗ್ಗೆ ದಾಖಲೆಗಳಿವೆ. ನೋನಿಯನ್ನು 'ಭಾರತದ ಮಲ್ಬರಿ' ಎಂದೂ ಕರೆಯುತ್ತಾರೆ.

ಪೊದೆಯ ರೂಪದ ಈ ಗಿಡ, ಸಾಮಾನ್ಯವಾಗಿ ಹತ್ತು ಅಡಿ ಎತ್ತರಕ್ಕೆ ಬೆಳೆಯುತ್ತದೆ. ಬಿಳಿ ಹೂ ಬಿಟ್ಟ ನಂತರ ಕಾಯಿಯಾಗುತ್ತದೆ. ನೋನಿ ಹಣ್ಣು ಮೂರರಿಂದ ನಾಲ್ಕು ಡಯಾಮೀಟರಿನಷ್ಟು ದೊಡ್ಡದಾಗಿರುತ್ತದೆ.

ಬಹೂಪಯೋಗಿ ಹಾಗೂ ನೋವು ನಿವಾರಕ ನೋನಿ ಹಣ್ಣುಗಳನ್ನೇ ಪ್ರಧಾನ ಕೃಷಿ ಕಸುಬಾಗಿ ಸ್ವೀಕರಿಸಿ ಯಶಸ್ವಿಯಾಗಿರುವ ರೈತ ಕುಟುಂಬವೊಂದು ಶಿವಮೊಗ್ಗದ ರಾಮೀನಕೊಪ್ಪದಲ್ಲಿದೆ.

(8ನೇ ಪುಟ ನೋಡಿ)



ಶ್ರೀನಿವಾಸಮೂರ್ತಿ ದಂಪತಿ